

بسم اللہِ الرّحمٰن الرّحیم

# ಪವಿತ್ರ ಖುರ್‌ಆನಿನ ಶ್ರೇಷ್ಠ ಮಾರ್ಗದರ್ಶನ
# ಅಂತ್ಯವಿಲ್ಲದ ಪ್ರಯೋಜನಗಳು ಮತ್ತು ಸದ್ಗುಣಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **03–02–2023** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ- بِسْمِ اللّٰهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعَالَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಪವಿತ್ರ ಖುರ್‌ಆನಿನ ಅನುಗ್ರಹಗಳು, ಪ್ರಕಾಶಗಳು, ವರದಾನಗಳು ಮತ್ತು ಪ್ರಭಾವಗಳ ಬಾಗಿಲು ಯಾವಾಗಲೂ ತೆರೆದಿದ್ದು ಅವು ಜಾರಿಯಾಗುತ್ತಾ ಇರುತ್ತವೆ. ಪವಿತ್ರ ಖುರ್‌ಆನಿನ ಜೀವಂತ, ತಾಜಾ ಪ್ರಭಾವಗಳು ಪ್ರತಿಯೊಂದು ಕಾಲದಲ್ಲಿ ಹೊಳೆಯುತ್ತಾ ಕಾಣಿಸುತ್ತಾ ಇರುತ್ತವೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಕಾಲದಲ್ಲಿ ಇದ್ದ ಹಾಗೆಯೇ ಈಗಲೂ ಜಾರಿಯಲ್ಲಿರುತ್ತವೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅದರ ಪುರಾವೆಯಾಗಿ ಕಳುಹಿಸಲಾಗಿದೆ. ಅಲ್ಲಾಹನು ಹೀಗೆ ವಾಗ್ದಾನ ಮಾಡಿರುವನು: اِنَّا نَحْنُ نَزَّلْنَا الذِّكْرَ وَاِنَّا لَهٗ لَحٰفِظُوْنَ ದಿಟವಾಗಿ ನಾವೇ ಈ ಉಪದೇಶವನ್ನು ಅವತೀರ್ಣಗೊಳಿಸಿದ್ದು. ಖಂಡಿತವಾಗಿಯೂ ನಾವೇ ಅದನ್ನು ಸಂರಕ್ಷಿಸುವೆವು. (ಪವಿತ್ರ ಖುರ್‌ಆನ್ 15:10).

ಈ ಕಾಲದಲ್ಲಿ ಅಲ್ಲಾಹನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧರಾದ ಸೇವಕ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಪವಿತ್ರ ಖುರ್‌ಆನಿನ ಪ್ರಚಾರ ಮತ್ತು ಸಂರಕ್ಷಣೆಗೋಸ್ಕರ ಕಳುಹಿಸಿರುವನು. ಅಲ್ಲಾಹನು ಅವರಿಗೆ ಎಂತಹ ಸೂಕ್ಷ್ಮ ಜ್ಞಾನಗಳನ್ನು ಕಲಿಸಿದನೆಂದರೆ ಅವುಗಳು ಜನರಿಂದ ಮರೆಯಾಗಿದ್ದುವು. ಅವರ ಮೂಲಕ ಪವಿತ್ರ ಖುರ್‌ಆನಿನ ಅನುಗ್ರಹಗಳ ಕಾರಂಜಿಯನ್ನು ಅಲ್ಲಾಹನು ಜಾರಿಗೊಳಿಸಿದನು. ಲೋಕದಲ್ಲಿ ಪವಿತ್ರ ಖುರ್‌ಅನಿನ ಆಡಳಿತೆಯನ್ನು ಸ್ಥಾಪಿಸಲಿಕ್ಕೋಸ್ಕರವೇ ಅವರು ಆಗಮಿಸಿದರು. ಆದರೆ ಭಾಗ್ಯಹೀನರಾದ ಮೌಲವಿ ನಾಮಧೇಯರು ಆರಂಭ ಕಾಲದಿಂದಲೇ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಾದವನ್ನು ವಿರೋಧಿಸುವುದನ್ನು ತಮ್ಮ ಉದ್ದೇಶಲಕ್ಷ್ಯವಾಗಿ ಮಾಡಿದರು. ಅವರು ಯಾವುದೇ ಬುದ್ಧಿಮತ್ತೆಯ ಸಾಕ್ಷ್ಯಾಧಾರಗಳ ಮಾತನ್ನು ಆಲಿಸಲು ಇಚ್ಛಿಸುವುದಿಲ್ಲ. ಅವರು ಜನಸಾಮಾನ್ಯರನ್ನು ದಾರಿ ತಪ್ಪಿಸುತ್ತಿದ್ದಾರೆ. ಅವರು ಸ್ವತಃ ಜ್ಞಾನರಹಿತರಾಗಿದ್ದಾರೆ ಮತ್ತು ಅಲ್ಲಾಹನು ಕಳುಹಿಸಿದವರ ಮಾರ್ಗವನ್ನು ತಡೆಯಲು ಪ್ರಯತ್ನಿಸುತ್ತಿದ್ದಾರೆ. ಅವರು ತಮ್ಮ ಕೆಲಸವನ್ನು ಪವಿತ್ರ ಖುರ್‌ಆನಿಗೆ ತಾವು ಮಾಡುವ ಸೇವೆ ಎಂದು ಹೇಳುತ್ತಿದ್ದಾರೆ. ಪಾಕಿಸ್ಥಾನದಲ್ಲಿ ಆಗಾಗ ಈ ಮೌಲವಿ ನಾಮಧಾರಿಗಳು ಕುದಿಯಲು ಪ್ರಾರಂಭಿಸುತ್ತಾರೆ. ಅವರೊಂದಿಗೆ ಅಗ್ಗದಲ್ಲಿ ಪ್ರಚಾರಗಳಿಸಲು ಪ್ರಯತ್ನಿಸುವ ರಾಜಕಾರಣಿಗಳು ಮತ್ತು ಸರಕಾರದ ಜನರು ಸಹ ಸೇರಿಕೊಳ್ಳುತ್ತಾರೆ. ಹಾಗೆ ಅವರು ವಿವಿಧ ನೆವನಗಳನ್ನು ಹೇಳಿ ಅಹ್ಮದಿಯರನ್ನು ದೌರ್ಜನ್ಯಗಳಿಗೆ ಗುರಿಪಡಿಸುತ್ತಿದ್ದಾರೆ. ಕಳೆದ ಕೆಲವು ಸಮಯಗಳಲ್ಲಿ ಪವಿತ್ರ ಖುರ್‌ಆನನ್ನು ಅವಹೇಳನಕ್ಕೆ ಗುರಿಪಡಿಸುತ್ತಿದ್ದಾರೆ ಎಂಬ ಸುಳ್ಳು ಆರೋಪವನ್ನು ಅಹ್ಮದಿಯರ ಮೇಲೆ ಹೊರಿಸಿ ಮೊಕದ್ದಮೆ ದಾಖಲಿಸಲು ಪ್ರಯತ್ನಿಸುತ್ತಿದ್ದಾರೆ. ಅವರ ಕೆಡುಕುಗಳಿಂದ ಅಲ್ಲಾಹನು ರಕ್ಷಿಸಲಿ. ತಪ್ಪಾದ ಮತ್ತು ದೌರ್ಜನ್ಯಕರ ಆರೋಪಗಳಿಗೆ ಗುರಿಪಡಿಸಿ ಯಾವ ಅಹ್ಮದಿಯರನ್ನು ಈ ಜನರು ಬಂಧನಕ್ಕೆ ಗುರಿಪಡಿಸಿರುವರೋ ಅವರು ಬೇಗನೆ ಬಿಡುಗಡೆ ಹೊಂದುವಂತೆ ಅಲ್ಲಾಹನು ಮಾಡಲಿ.

ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳಿದ್ದಾನೆ: مَا فَرَّطْنَا فِي الْكِتٰبِ مِنْ شَيْءٍ ಈ ಗ್ರಂಥದಲ್ಲಿ ನಾವು ಯಾವ ಲೋಪವನ್ನು ಮಾಡಿಲ್ಲ. (6:39). ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಪವಿತ್ರ ಖುರ್‌ಆನ್‌ನಲ್ಲಿರುವ ಉಪದೇಶಗಳು ಪರಿಪೂರ್ಣವಾಗಿವೆ ಎಂಬುದು ನನ್ನ ಧಾರ್ಮಿಕ ನಿಲುವು ಆಗಿದೆ. ಏಕೆಂದರೆ ಅಲ್ಲಾಹನು ಹೇಳಿದ್ದಾನೆ – ನಾವು ಯಾವುದನ್ನೂ ಈ ಗ್ರಂಥದಿಂದ ಹೊರಗೆ ಇರಿಸಿಲ್ಲ. ಪವಿತ್ರ ಖುರ್‌ಆನಿನಿಂದ ಧಾರ್ಮಿಕ ಸಮಸ್ಯೆಗಳಿಗೆ ಪರಿಹಾರವನ್ನು ನಿಷ್ಕರ್ಷಿಸುವುದು ಮತ್ತು ಅಲ್ಲಾಹನ ಉದ್ದೇಶ ಪ್ರಕಾರ ಅವುಗಳನ್ನು ಕಂಡುಕೊಳ್ಳುವುದು ಪ್ರತಿಯೊಬ್ಬ ಮೌಲವಿ ಅಥವಾ ಸಂಶೋಧಕ ಮಾಡಬಲ್ಲ ಕೆಲಸವಲ್ಲ. ಅಲ್ಲಾಹನ ಸಂದೇಶವಾಣಿ ಗಳಿಸುವ ಅನುಗ್ರಹ ಪಡೆದವರು ಮಾತ್ರ ಅಂತಹ ಕೆಲಸ ಮಾಡಬಲ್ಲರು. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೇಳುತ್ತಾನೆ: لَّا يَمَسُّهٗۤ اِلَّا الْمُطَهَّرُوْنَ ಪರಿಶುದ್ಧರಾದವರು ಹೊರತು ಬೇರ್ಯಾರೂ ಅದನ್ನು ಸ್ಪರ್ಶಿಸಲಾರರು. (56:80). ಅಲ್ಲಾಹನ ಸಂದೇಶವಾಣಿಗಳಿಂದ ಪ್ರಕಾಶ ಪಡೆದ ಜನರು ಪವಿತ್ರ ಖುರ್‌ಆನಿನ ರಹಸ್ಯಾರ್ಥಗಳನ್ನು ಬಹಿರಂಗ ಪಡಿಸುತ್ತಾ ಇರುತ್ತಾರೆ. ಹದೀಸುಗಳಲ್ಲಿ ಪವಿತ್ರ ಖುರ್‌ಆನ್‌ನಲ್ಲಿ ಅಡಕವಾಗಿರದ ಯಾವುದೇ ಜ್ಞಾನವನ್ನು ಪ್ರಕಟಿಸಲಾಗಿಲ್ಲ. ಹದೀಸುಗಳಲ್ಲಿ ಪವಿತ್ರ ಖುರ್‌ಆನ್‌ನಲ್ಲಿರುವ ಜ್ಞಾನವನ್ನು ವಿಶದೀಕರಿಸಲಾಗಿದೆ. ಆದುದರಿಂದ ನೀವು ಪವಿತ್ರ ಖುರ್‌ಆನನ್ನು ಬಹಳ ಶ್ರದ್ಧೆಯಿಂದ ಓದಿರಿ. ಪವಿತ್ರ ಖುರ್‌ಆನನ್ನು ಬಹಳ ಪ್ರೀತಿಸಿರಿ. ಬೇರೆ ಯಾವುದನ್ನೂ

ಪ್ರೀತಿಸಿರದ ರೀತಿಯಲ್ಲಿ ಅದನ್ನು ಪ್ರೀತಿಸಿರಿ. ಎಲ್ಲ ವಿಧಗಳ ಒಳಿತುಗಳು ಪವಿತ್ರ ಖುರ್‌ಆನ್‌ನಲ್ಲಿವೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅಲ್ಲಾಹನು ನನ್ನೊಂದಿಗೆ ಹೇಳಿದನು, **ಅಲ್ ಖೈರು ಕುಲ್ಲುಹು ಫಿಲ್ ಖುರ್‌ಆನ್**. ಎಲ್ಲ ಒಳಿತುಗಳು ಪವಿತ್ರ ಖುರ್‌ಆನ್‌ನಲ್ಲಿವೆ. ಪವಿತ್ರ ಖುರ್‌ಆನ್ ಮೇಲೆ ಯಾವುದಾದರೂ ವಸ್ತುವಿಗೆ ಆದ್ಯತೆ ನೀಡುವವರ ಬಗ್ಗೆ ನನಗೆ ಖೇದವಿದೆ. ನಿಮ್ಮ ಜಯ ಮತ್ತು ಮೋಕ್ಷದ ಉದ್ಭವಸ್ಥಾನ ಪವಿತ್ರ ಖುರ್‌ಆನ್ ಆಗಿದೆ. ಪವಿತ್ರ ಖುರ್‌ಆನ್ ಮೂಲಕ ಪರಿಹಾರ ಲಭಿಸದ ಯಾವುದೇ ಧಾರ್ಮಿಕ ವಿಷಯವಿಲ್ಲ. ಖಿಯಾಮತ್ ದಿನ ನಿಮ್ಮ ವಿಶ್ವಾಸದ ಬಗ್ಗೆ ಅಂಗೀಕಾರ ನೀಡುವುದು ಮತ್ತು ಅಲ್ಲಗಳೆಯುವುದು ಪವಿತ್ರ ಖುರ್‌ಆನ್ ಆಗಿರುವುದು. ಆಕಾಶದಡಿಯಲ್ಲಿ ಪವಿತ್ರ ಖುರ್‌ಆನಿನ ಹೊರತು ನಿಮಗೆ ನೇರವಾಗಿ ಮಾರ್ಗದರ್ಶನ ನೀಡಬಲ್ಲ ಬೇರೆ ಯಾವ ಗ್ರಂಥವೂ ಇಲ್ಲ.

ಮೇಲೆ ವಿವರಿಸಿದಂತ ಯೋಚನೆಗಳನ್ನು ಹೊಂದಿ ತನ್ನ ಅನುಯಾಯಿಗಳಿಗೆ ಉಪದೇಶ ನೀಡಿರುವಂತಹ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬಗ್ಗೆ ಅವರು ಯಾವುದಾದರೂ ರೀತಿಯಲ್ಲಿ ಪವಿತ್ರ ಖುರ್‌ಆನ್‌ನಲ್ಲಿ ಹಸ್ತಕ್ಷೇಪ ಮಾಡಿರುವರೆಂದು ಆಕ್ಷೇಪಿಸಲು ಸಾಧ್ಯವೇ? ಹಾಗೆ ಆಕ್ಷೇಪಿಸುವವರ ಬುದ್ಧಿಶೂನ್ಯತೆ ಪ್ರಕಟವಾಗುತ್ತಿದೆ.

ಮುಸ್ಲಿಮರ ಭಾಗ್ಯಹೀನತೆಯ ಕಾರಣದಿಂದ ಅವರ ಬಳಿ ಪವಿತ್ರ ಖುರ್‌ಆನ್ ಇದ್ದರೂ ಅದರ ಉಪದೇಶಗಳನ್ನು ಕಾರ್ಯಗತಗೊಳಿಸದ ಕಾರಣ ಅದರ ಆಧ್ಯಾತ್ಮಿಕ ಅನುಗ್ರಹಗಳಿಂದ ಲಾಭಗಳನ್ನು ಪಡೆಯುವುದಿಲ್ಲ. ಯಾವ ಮಹಾನುಭಾವರನ್ನು ಅಲ್ಲಾಹನು ಪವಿತ್ರ ಖುರ್‌ಆನಿನ ಜ್ಞಾನವನ್ನು ಹರಡಲು ಕಳುಹಿಸಿರುವನೋ ಅವರನ್ನು ಈ ಜನರು ನಂಬಲು ನಿರಾಕರಿಸುತ್ತಿದ್ದಾರೆ.

ನಿಮಗೆ ಲೌಕಿಕ ಸ್ವಾರ್ಥ ಉದ್ದೇಶಗಳಿಲ್ಲವಾದರೆ ಪವಿತ್ರ ಖುರ್‌ಆನ್ ನಿಮ್ಮನ್ನು ಪ್ರವಾದಿಗಳ ಹಾಗೆ ಪರಿವರ್ತಿಸ ಬಲ್ಲುದಾಗಿದೆ. ನೀವು ಪವಿತ್ರ ಖುರ್‌ಆನ್‌ನಿಂದ ದೂರ ಸರಿದು ಓಡಿ ಹೋಗಬೇಡಿರಿ. ನೀವು ಪರಿಪೂರ್ಣವಾಗಿ ಪವಿತ್ರ ಖುರ್‌ಆನ್ ಉಪದೇಶಗಳನ್ನು ಅನುಸರಿಸಿರಿ. ಪವಿತ್ರ ಖುರ್‌ಆನಿನ ಪ್ರತಿಯೊಂದು ಆಜ್ಞೆಯನ್ನು ಪಾಲಿಸಲು ಬದ್ಧವಾದರೆ ಪ್ರವಾದಿಗಳ ವರ್ಣದಲ್ಲಿ ಮನುಷ್ಯನು ವರ್ಣರಂಜಿತನಾಗಬಲ್ಲ. ಪವಿತ್ರ ಖುರ್‌ಆನಿನ ಅನುಗ್ರಹಗಳಿಂದ ಒಬ್ಬ ಮನುಷ್ಯನು ಗಳಿಸಬಲ್ಲ ಅತ್ಯುನ್ನತ ಸ್ಥಾನ ಇದಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಪವಿತ್ರ ಖುರ್‌ಆನ್ ಹೊರತು ಬೇರೆ ಯಾವ ಗ್ರಂಥ ಈ ಪ್ರಾರ್ಥನೆ ಕಲಿಸಿದೆ: **اِہْدِنَا الصِّرَاطَ الْمُسْتَقِيْمَ صِرَاطَ الَّذِيْنَ اَنْعَمْتَ عَلَيْہِمْ** – ನೀನು ನಮ್ಮನ್ನು ಸರಿಯಾದ ಮಾರ್ಗದಲ್ಲಿ ನಡೆಸು. ನಿನ್ನ ಅನುಗ್ರಹಕ್ಕೆ ಪಾತ್ರರಾದವರ, ಕ್ರೋಧಕ್ಕೆ ಈಡಾಗದವರ ಮತ್ತು ದಾರಿತಪ್ಪದವರ ಮಾರ್ಗದಲ್ಲಿ. (1:6,7). ನಬಿ, ಸಿದ್ದೀಖ್, ಶಾಹಿದ್ ಮತ್ತು ಸಾಲಿಹರ ಅನುಗ್ರಹಗಳನ್ನು ಗಳಿಸಲು ಪ್ರಾರ್ಥಿಸಲು ಕಲಿಸಲಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಪವಿತ್ರ ಖುರ್‌ಆನನ್ನು ತ್ಯಾಜ್ಯ ವಸ್ತುವಿನ ಹಾಗೆ ಬಿಟ್ಟುಬಿಡಬೇಡಿರಿ. ನಿಮ್ಮ ಜೀವಿತ ಅದರಲ್ಲಿಯೇ ಇದೆ. ಇಹಲೋಕದಲ್ಲಿ ಪವಿತ್ರ ಖುರ್‌ಆನ್ ಬಗ್ಗೆ ಗೌರವ ನೀಡುವವರು ಪರಲೋಕದಲ್ಲಿ ಗೌರವ ಪಡೆಯುವರು. ಪ್ರತಿಯೊಂದು ಹದೀಸು ಮತ್ತು ಪ್ರತಿಯೊಂದು ನುಡಿಯ ಮೇಲೆ ಪವಿತ್ರ ಖುರ್‌ಆನಿಗೆ ಆದ್ಯತೆ ನೀಡುವವರು ಆಕಾಶದಲ್ಲಿ ಆದ್ಯತೆ ಗಳಿಸುವವರಾಗುವರು. ಈಗ ಮಾನವರಿಗೆ ಭೂಮಿಯಲ್ಲಿ ಪವಿತ್ರ ಖುರ್‌ಆನ್ ಹೊರತು ಬೇರೆ ಧಾರ್ಮಿಕ ಗ್ರಂಥವಿಲ್ಲ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹೊರತು ಬೇರೆ ಸಂದೇಶವಾಹಕನಾಗಲಿ ಶಫೀಅ್ (ಶಿಫಾರಸುಗಾರ)ನಾಗಲಿ ಇಲ್ಲ. ನೀವು ಈ ವೈಭವಶಾಲಿ ಪೈಗಂಬರರ ಬಗ್ಗೆ ಸತ್ಯವಾದ ಗೌರವ ಹೊಂದಿರಿ. ಬೇರೆ ಯಾರಿಗೂ ಅವರಿಗೆ ನೀಡುವಂತಹ ಹಿರಿತನ ನೀಡಬೇಡಿರಿ. ನೀವು ಈ ಉಪದೇಶ ಪಾಲಿಸಿದರೆ ಮೋಕ್ಷಗಳಿಸಿದವರೆಂದು ಬರೆಯಲ್ಪಡುವಿರಿ. ಮೋಕ್ಷ ಎನ್ನುವುದು ಮರಣದ ನಂತರ ಪ್ರಕಟವಾಗುವಂತಹದಲ್ಲ. ವಾಸ್ತವಿಕ ಮೋಕ್ಷದ ಪ್ರಕಾಶ ಇಹಲೋಕದಲ್ಲಿಯೇ ಪ್ರಕಟವಾಗುತ್ತದೆ.

ಆಗ ಮನುಷ್ಯನು ಪ್ರತಿಯೊಂದು ಅಂಧಕಾರವನ್ನು ಎದುರಿಸಲು ಸಿದ್ಧನಾಗುತ್ತಾನೆ. ಅದಕ್ಕೆ ಸಂಬಂಧಿಸಿದ ಹೊಚ್ಚ ಹೊಸ ಉದಾಹರಣೆ ಬುರ್ಕಿನೋ ಫಾಸೋದ ನಮ್ಮ ಶಹೀದ್ ಸಹೋದರರಲ್ಲಿ ಸಿಗುತ್ತದೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅಂತಹ ಸತ್ಯವಿಶ್ವಾಸಿಗಳು ಅಲ್ಲಾಹನು ಇದ್ದಾನೆಂದು ಸತ್ಯವಾಗಿ ನಂಬುತ್ತಾರೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ತಮ್ಮ ಮತ್ತು ಎಲ್ಲ ಮನುಷ್ಯರಿಗೆ ಶಫೀಅ್ ಎಂದು ನಂಬುತ್ತಾರೆ. ಅವರಿಗೆ ಸಮಾನರಾದ ಯಾವ ಸಂದೇಶವಾಹಕರೂ ಇಲ್ಲ ಪವಿತ್ರ ಖುರ್‌ಆನಿಗೆ ಸಮಾನವಾದ ಯಾವುದೇ ಧಾರ್ಮಿಕ ಗ್ರಂಥವಿಲ್ಲ. ಶಾಶ್ವತವಾಗಿ ಜೀವಿಸಿರಲು ಅಲ್ಲಾಹನು ಬೇರೆ ಯಾರ ಬಗ್ಗೆಯೂ ಇಚ್ಛಿಸಿಲ್ಲವಾದರೂ ನಮ್ಮ ಪರಿಶುದ್ಧ ಪೈಗಂಬರರು ಶಾಶ್ವತವಾಗಿ ಜೀವಿಸಿರುವವರಾಗಿದ್ದಾರೆ.

ಅಹ್ಮದಿಯರಾದ ನಾವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನಊಧುಬಿಲ್ಲಾಹ್ ಅಪಮಾನಿಸುತ್ತಿದ್ದೇವೆ ಎಂಬ ಸುಳ್ಳು ಆಪಾದನೆಯನ್ನು ನಾವು ತಿರಸ್ಕರಿಸುತ್ತೇವೆ.

ಒಟ್ಟಿನಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬುವ ನಾವು ಆ ಮಟ್ಟವನ್ನು ಗಳಿಸುವ ಆವಶ್ಯಕತೆ ಇದೆ. ನಮ್ಮ ವಿರುದ್ಧ ಕುಫ್ರ್ ಫತ್ವ ನೀಡುವವರಿಗೆ ನಾವು ಹೀಗೆ ಹೇಳುವ ಆವಶ್ಯಕತೆ ಇದೆ – ಅಹ್ಮದಿಯರು ಪುರಾತನ ಕಥೆಗಳನ್ನು ಮಾತ್ರ ಹೇಳುವವರಲ್ಲ. ಜೀವಂತ ಗ್ರಂಥ ಮತ್ತು ಜೀವಂತ ಪ್ರವಾದಿಯನ್ನು ನಂಬುವವರ ಮೇಲೆ ಈಗ ಸಹ ಅಲ್ಲಾಹನ ಅನುಗ್ರಹ ಸುರಿಯುತ್ತಾ ಇರುತ್ತದೆ. ಅಲ್ಲಾಹನು

ಈಗ ಸಹ ಮಾತನಾಡುತ್ತಾನೆಂದು ನಾವು ದೃಢವಿಶ್ವಾಸ ಹೊಂದಿದ್ದೇವೆ.

ಅಲ್ಲಾಹನು ನಮಗೆ ಖಾತಮುಲ್ ಮೂಮಿನೀನ್, ಖಾತಮುಲ್ ಆರಿಫೀನ್, ಖಾತಮುನ್ನಬಿಯ್ಯೀನ್ ಆಗಿರುವ ಪೈಗಂಬರರನ್ನು ನೀಡಿರುವನು. ಅವರಿಗೆ ಅಲ್ಲಾಹನು ಜಾಮಿಉಲ್ ಕುತುಬ್ ಮತ್ತು ಖಾತಮುಲ್ ಕುತುಬ್ ಆಗಿರುವ ಪವಿತ್ರ ಖುರ್‌ಆನ್ ಅವತೀರ್ಣಗೊಳಿಸಿರುವನು.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಖಾತಮುನ್ನಬಿಯ್ಯೀನ್ ಆಗಿದ್ದಾರೆ. ಅವರ ಮೂಲಕ ನುಬುವ್ವತ್ ಕೊನೆಗೊಂಡಿತು. ಆದರೆ ಅದು ಕೊನೆಗೊಂಡದ್ದು ಒಬ್ಬನ ಕತ್ತುಹಿಸುಕಿ ಕೊಂದ ಹಾಗೆ ಅಲ್ಲ. ಅಂತಹ ಕೊನೆಗೊಳ್ಳುವಿಕೆ ಅಭಿಮಾನಾರ್ಹವಲ್ಲ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಲ್ಲಿ ನುಬುವ್ವತ್ ಕೊನೆಗೊಂಡಿತು ಎಂದರೆ ಅದರ ಅರ್ಥ ಹಝ್ರತ್ ಆದಮ್‌ರವರ ಮೊದಲುಗೊಂಡು ಹಝ್ರತ್ ಈಸಾ ಅಲೈಹಿಸ್ಸಮರ ತನಕ ನೀಡಲ್ಪಟ್ಟ ವಿವಿಧ ರೀತಿಯ ಅನುಗ್ರಹಗಳು ಎಲ್ಲವೂ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಒಟ್ಟಾಗಿ ಸಮಗ್ರವಾಗಿ ನೀಡಲ್ಪಟ್ಟವು. ಆ ರೀತಿ ಅವರು ಸಹಜವಾಗಿ ಖಾತಮುನ್ನಬಿಯ್ಯೀನ್ ಆದರು. ಇದೇ ರೀತಿ ವಿವಿಧ ಗ್ರಂಥಗಳಲ್ಲಿ ಅಡಕವಾಗಿದ್ದ ಉಪದೇಶಗಳು, ದೈವಿಕ ಜ್ಞಾನ ಎಲ್ಲವೂ ಪವಿತ್ರ ಖುರ್‌ಆನ್‌ನಲ್ಲಿ ಅಡಕವಾಗಿ ಕೊನೆಗೊಂಡವು. ಆ ರೀತಿ ಪವಿತ್ರ ಖುರ್‌ಆನ್ ಖಾತಮುಲ್ ಕುತುಬ್ ಆಯಿತು.

ನಮ್ಮ ಮೇಲೆ ಆರೋಪಿಸಲಾಗುತ್ತಿರುವ ಮತ್ತೊಂದು ಆರೋಪ ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗಿಂತ ಶ್ರೇಷ್ಠರೆಂದು ಗಣಿಸಿ ಹಝ್ರತ್ ಪೈಗಂಬರ್(ಸ)ರನ್ನು ಅವಹೇಳಿಸುತ್ತಿದ್ದೇವೆ (ನಊಧುಬಿಲ್ಲಾಹ್) ಎಂಬುದಾಗಿದೆ.

ಮೇಲೆ ವಿವರಿಸಿದವುಗಳನ್ನು ಓದಿದ ನಂತರ ಯಾವುದೇ ಬುದ್ಧಿಶಾಲಿ ಆ ರೀತಿ ಅಹ್ಮದಿಯರ ಬಗ್ಗೆ ಆಕ್ಷೇಪ ಮಾಡಲಾರ.

ಪಾದರಿಗಳು ಹೀಗೆ ವಾದಿಸುತ್ತಾರೆ, ಪವಿತ್ರ ಖುರ್‌ಆನ್ ಏಕದೇವ ವಿಶ್ವಾಸ ಮತ್ತು ಧಾರ್ಮಿಕ ಉಪದೇಶಗಳಿಗೆ ಸಂಬಂಧಿಸಿ ಹೊಸದಾಗಿ ಏನನ್ನೂ ತಂದಿಲ್ಲ. ಎಲ್ಲವೂ ತೌರಾತ್‌ನಲ್ಲಿರುವುದೇ ಆಗಿದೆ ಎಂದು ಹೇಳುತ್ತಾರೆ. ಅವರ ಈ ವಾದ ಸಂಪೂರ್ಣ ಸುಳ್ಳು ಆಗಿದೆ. ಓರ್ವ ತಿಳಿಗೇಡಿ ಹೀಗೆ ಭಾವಿಸಬಹುದು. ತೌರಾತ್‌ನಲ್ಲಿ ಏಕದೇವ ವಿಶ್ವಾಸ ಮತ್ತು ಆರಾಧನೆಗಳ ಬಗ್ಗೆ ವಿವರಗಳಿವೆ. ಹೀಗಿರುವಾಗ ಪವಿತ್ರ ಖುರ್‌ಆನ್ ಹೊಸದಾಗಿ ಏನನ್ನು ತಂದಿದೆ ಎಂದು. ಇಂತಹ ಯೋಚನೆ ಮಾಡಿದವರು ಪವಿತ್ರ ಖುರ್‌ಆನಿನ ಅಧ್ಯಯನ ಮಾಡದವರಾಗಿದ್ದಾರೆ. ಆಧ್ಯಾತ್ಮಿಕತೆಗೆ ಸಂಬಂಧಿಸಿ ಬಹುತೇಕ ವಿವರಣೆಗಳು ತೌರಾತ್‌ನಲ್ಲಿ ಇಲ್ಲವೇ ಇಲ್ಲ. ಪ್ರವಾದಿ ಮೂಸಾರ ತೌರಾತ್‌ನಿಂದ ಪ್ರಾರಂಭಿಸಿ ಪ್ರವಾದಿ ಈಸಾರ ಇಂಜೀಲ್ ತನಕ ಎಲ್ಲ ಗ್ರಂಥಗಳು ಬನೀ ಇಸ್ರಾಈಲ್ ಕೋಮನ್ನು ಸಂಬೋಧಿಸುತ್ತವೆ. ಅವು ಎಲ್ಲರಿಗೂ ಅನ್ವಯಿಸುವುದಿಲ್ಲ. ಬನೀ ಇಸ್ರಾಈಲ್ ಕೋಮಿಗೆ ಮಾತ್ರ ಅನ್ವಯಿಸುತ್ತದೆ. ಆದರೆ ಖುರ್‌ಆನ್ ಸಕಲ ಲೋಕದ ಸುಧಾರಣೆಯ ಉದ್ದೇಶ ಹೊಂದಿದೆ. ಎಲ್ಲ ಜನರನ್ನು ಸಂಬೋಧಿಸಿ ಉಪದೇಶಿಸಲಾಗಿದೆ. ಪ್ರತಿಯೊಬ್ಬ ಮನುಷ್ಯನ ಸುಧಾರಣೆ ಅದರ ಉದ್ದೇಶ ಲಕ್ಷ್ಯವಾಗಿದೆ.

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِیَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَآءِ ذِی الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis***(atba)
*At, **'Masjid Mubarak'**, Islamabad, Tilford, UK, on 03-02-2023*
**Summarized by** *Majlis Ansarullah Bharat*
***Kannada Translation***: M. Ubeidullah for Kannada Desk, Qadian
***Reviewed by***: M.P Ibrahim |***Layout***: U Basheer Ahmad
***Published By***: Kannada Isha'at Team for Nazarath Nashr-O-Isha'ath, Qadian
**Email**: *khutuba.kannada@gmail.com*
**You can find all the Sermons archived at**: www.alislam.org/friday-sermon